**ಕರ್ನಾಟಕ ಸರ್ಕಾರ**

ಸಂ.ಡಿಟಿಇ/ 34 /ಎಸಿಎಂ(1)2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ:26-08-2017.

**-:: ಜ್ಞಾಪನ ::-**

**ವಿಷಯ:-** 2017-18ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಎಂ.ಬಿ.ಎ., ಎಂ.ಸಿ.ಎ., ಎಂ.ಇ./ ಎಂ.ಟೆಕ್. ಇಂಜಿನಿಯಾರಿಂಗ್ ಕೋರ್ಸುಗಳ ಪ್ರವೇಶಾತಿಗೆ ಸಂಬಂಧ ದಾಖಲಾತಿ ಪರಿಶೀಲನೆಗೆ ಉಪನ್ಯಾಸಕರನ್ನು ನಿಯೋಜಿಸುವ ಕುರಿತು.

**ಉಲ್ಲೇಖ:-**
1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂ. ಇಡಿ/ಕೆಇಎ/ಪರೀಕ್ಷೆ-ಪಿಜಿಸಿಇಟಿ/2017,ದಿ:19/26-08-2017.
2. ಈ ಕಛೇರಿ ಜ್ಞಾಪನ ಪತ್ರದ ದಿನಾಂಕ: 26-08-2017.

-0000000-

2017-18ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಎಂ.ಬಿ.ಎ., ಎಂ.ಸಿ.ಎ., ಎಂ.ಇ./ ಎಂ.ಟೆಕ್. ಇಂಜಿನಿಯಾರಿಂಗ್ ಕೋರ್ಸುಗಳ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರಿಗೆ ಸಹಕರಿಸುವ ನಿಟ್ಟಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್‌ಗಳಿಂದ ಪ್ರಾಧ್ಯಾಪಕರು/ ಉಪನ್ಯಾಸಕರುಗಳನ್ನು **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು** ಸಹಾಯ ಕೇಂದ್ರಕ್ಕೆ ಉಲ್ಲೇಖ(2)ರ ಈ ಕಛೇರಿ ಜ್ಞಾಪನ ಪತ್ರದಲ್ಲಿ ನಿಯೋಜಿಸಲಾಗಿದೆ.

ಉಲ್ಲೇಖ(1)ರ ಪತ್ರದಲ್ಲಿ ಸದರಿ ದಾಖಲಾತಿ ಪರಿಶೀಲನೆಗೆ ಮೇಲ್ವಿಚಾರಕಾರಾಗಿ ಕರ್ತವ್ಯ ನಿರ್ವಹಿಸಲು ಅಧಿಕಾರಿಗಳನ್ನು ನಿಯೋಜಿಸಲು ಕೋರಿರುತ್ತಾರೆ. ಪ್ರಯುಕ್ತ, ಸದರಿ ಪ್ರವೇಶ ಕಾರ್ಯಕ್ಕೆ ಈ ಕೆಳಕಂಡ ಅಧಿಕಾರಿಗಳನ್ನು ಮೇಲ್ವಿಚಾರಕಾರಾಗಿ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು** ಸಹಾಯ ಕೇಂದ್ರಕ್ಕೆ ಕರ್ತವ್ಯ ನಿರ್ವಹಿಸಲು ಈ ತಕ್ಷಣದಿಂದ ಜಾರಿಗೆ ಬರುವಂತೆ ನಿಯೋಜಿಸಲಾಗಿದೆ.

| ಕ್ರ. ಸಂ | **ಮೇಲ್ವಿಚಾರಕಾರಾಗಿ ನಿಯೋಜಿಸಲಾಗಿರುವ ಅಧಿಕಾರಿಯವರ ಹೆಸರು ಶ್ರೀಯುತರಾದ** |
|---|---|
| 1. | **ಮಾಧ್ವಚಾರ್ಯ, ಸಹಾಯಕ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು** |
| 2. | **ಟಿ.ಹರೀಶ್, ಸಹಾಯಕ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು** |
| 3. | **ಮಹಮದ್ ಅನ್ವರ್, ಸಹಾಯಕ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು** |

**ಮೇಲ್ಕಂಡ ಅಧಿಕಾರಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು** ಸಹಾಯ ಕೇಂದ್ರಕ್ಕೆ ದಾಖಲೆಗಳ ಪರಿಶೀಲನೆಗೆ ಮೇಲ್ವಿಚಾರಕಾರಾಗಿ ಕರ್ತವ್ಯ ನಿರ್ವಹಿಸಲು ಈ ತಕ್ಷಣದಿಂದ ಜಾರಿಗೆ ಬರುವಂತೆ **ದಿ:30-08-2017 ರಿಂದ ದಿ:07-09-2017ರವರೆಗೆ ನಿಯೋಜಿಸಲಾಗಿದೆ. ಹಾಗೂ ದಾಖಲೆಗಳ ಪರಿಶೀಲನೆ ಮುಗಿದ ನಂತರ ದಿ:08-09-2017ರಂದು ಸಂಬಂಧಪಟ್ಟ ಕಛೇರಿ/ಸಂಸ್ಥೆಗಳಲ್ಲಿ ವರದಿ ಮಾಡಿಕೊಳ್ಳತಕ್ಕದ್ದು.**

**ನಿರ್ದೇಶಕರು**

ಗೆ,

ಮೇಲ್ಕಂಡ ಅಧಿಕಾರಿಗಳಿಗೆ,

26/8/17

**ಪ್ರತಿ:**

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
2. ಆಡಳಿತಾಧಿಕಾರಿಗಳು, ತಾ. ಶಿ. ನಿ. ಬೆಂಗಳೂರು.
3. ನಿರ್ದೇಶಕರ ಆಪ್ತ ಶಾಖೆಗೆ, ತಾ. ಶಿ. ನಿ. ಬೆಂಗಳೂರು.
4. ಸಂಯೋಜನಾಧಿಕಾರಿಗಳು, ತಾ. ಶಿ. ನಿ. ಬೆಂಗಳೂರು – ಸದರಿ ಜ್ಞಾಪನ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
5. ಇಎಸ್‌ಟಿ(8) ವಿಭಾಗಕ್ಕೆ, ತಾ. ಶಿ. ನಿ. ಬೆಂಗಳೂರು.
6. ಕಛೇರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.